# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 141
2. ಸದಸ್ಯರ ಹೆಸರು : ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 14-02-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರಕ್ಕೆ 24X7 ಕುಡಿಯುವ ನೀರಿನ ಸರಬರಾಜು ಯೋಜನೆಯ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು) | ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (KUWSMP) ಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ- ಕಾರ್ಯಾಚರಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: UDD 279 PRJ 2018, ದಿನಾಂಕ:22-10-2018 ರಂತೆ ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ ಗುತ್ತಿಗೆಯನ್ನು ಮೆ\|\| ಎಲ್ & ಟಿ ಲಿಮಿಟೆಡ್ ಚೆನ್ನೈ ರವರಿಗೆ ಗುತ್ತಿಗೆ ಕರಾರು ಸಂಖ್ಯೆ: IN-KUIDFC-99723-CW-RFB, ದಿನಾಂಕ:10.06.2020 ರಂದು ರೂ.837.43 ಕೋಟಿಗಳಿಗೆ ನೀಡಲಾಗಿದೆ. ಗುತ್ತಿಗೆ ಕರಾರಿನಂತೆ 5 ವರ್ಷಗಳಲ್ಲಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ, ತದನಂತರ 7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಗುತ್ತಿಗೆದಾರರು ನಿರ್ವಹಿಸಬೇಕಾಗಿರುತ್ತದೆ.<br><br>ಆಪರೇಟರ್ ರವರು ಹಾಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ವಹಣೆಗೆ ಗುತ್ತಿಗೆ ಕರಾರಿನಂತೆ ಹಸ್ತಾಂತರ ಮಾಡಿಕೊಂಡು ನಿರ್ವಹಣೆಯನ್ನು ನಿರ್ವಹಿಸುತ್ತಿರುತ್ತಾರೆ.<br><br>**ಪ್ರಸ್ತುತ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿರುತ್ತಾರೆ.**<br><br>• 1342 ಎಂಎಂ ವ್ಯಾಸದ ಕಚ್ಚಾ ನೀರಿನ ಏರು ಕೊಳವೆ 13.59 ಕಿ.ಮೀ ಸರಬರಾಜು ಮಾಡಿ ಅದರಲ್ಲಿ ಇದುವರೆಗೆ 5.79 ಕಿ.ಮೀ ಉದ್ದದ ಕೊಳವೆಯನ್ನು ಅಳವಡಿಸಿರುತ್ತಾರೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | • ಸಲಾಂತ್ರೇಕಡಿಯಲ್ಲಿ 58.77 ಎಂಎಲ್ ಸಾಮರ್ಥ್ಯದ ಜಲ ಶುದ್ಧೀಕರಣಗಾರದ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿ ಇದುವರೆಗೆ ಶೇ.20 ರಷ್ಟು ಪ್ರಗತಿ ಸಾಧಿಸಿರುತ್ತಾರೆ.<br>• ವಿವಿಧ ವ್ಯಾಸದ ಶುದ್ಧ ಕುಡಿಯುವ ನೀರಿನ ಮುಖ್ಯ ಕೊಳವೆ ಉದ್ದ 31.2 ಕಿ.ಮೀ ಕೊಳವೆಗಳನ್ನು ಸರಬರಾಜು ಮಾಡಿರುತ್ತಾರೆ. ಇವುಗಳಲ್ಲಿ ಇದುವರೆಗೆ 2.7 ಕಿ.ಮೀ ಉದ್ದದ ಕೊಳವೆ ಮಾರ್ಗವನ್ನು ಅಳವಡಿಸಿರುತ್ತಾರೆ.<br>• 8 ಮೇಲೆತ್ತರದ ಜಲಸಂಗ್ರಹಾಗಾರ ಕಾಮಗಾರಿಯನ್ನು ಪ್ರಾರಂಭಿಸಿ, ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.<br>ವಿವಿಧ ವ್ಯಾಸದ ವಿತರಣಾ ಜಾಲದ ಕೊಳವೆ 125.00 ಕಿ.ಮೀ ಸರಬರಾಜು ಮಾಡಿ ಅದರಲ್ಲಿ 100 ಕಿ.ಮೀ ಉದ್ದದ ವಿವಿಧ ವ್ಯಾಸದ ವಿತರಣಾ ಕೊಳವೆಯನ್ನು ಅಳವಡಿಸಿರುತ್ತಾರೆ. |
| (ಆ) | ಕುಡಿಯುವ ನೀರಿನ ಸರಬರಾಜು ಯೋಜನೆಯ ಕಾಮಗಾರಿಯನ್ನು ಯಾವ ಕಾಲ ಮಿತಿಯೊಳಗೆ ಪೂರ್ಣಗೊಳಿಸಲಾಗುವುದು; (ಮಾಹಿತಿ ನೀಡುವುದು) | ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ದಿನಾಂಕ:09-06-2025 ರೊಳಗೆ ಪೂರ್ಣಗೊಳಿಸಲಾಗುವುದು. |
| (ಇ) | ಇದುವರೆವಿಗೂ ಪೂರ್ಣಗೊಂಡಿರುವ ಶೇಕಡವಾರು ಕಾಮಗಾರಿ ಹಾಗೂ ಸದರಿ ಯೋಜನೆಗೆ ಖರ್ಚು ಮಾಡಿದ ಹಣ ಎಷ್ಟು? (ವಿವರ ನೀಡುವುದು) | ಕಲಬುರಗಿ ನಗರದ ನಿರಂತರ ನೀರು ಸರಬರಾಜು ನಿರ್ಮಾಣ ಕಾಮಗಾರಿಯು ಭೌತಿಕವಾಗಿ ಶೇ.23 ರಷ್ಟು ಪ್ರಗತಿ ಸಾಧಿಸಿರುತ್ತದೆ. ಕಾಮಗಾರಿಯ ಆರ್ಥಿಕ ಪ್ರಗತಿ ಮೊತ್ತ ರೂ.85.80 ಕೋಟಿಗಳು ವೆಚ್ಚವಾಗಿರುತ್ತದೆ, ಆರ್ಥಿಕ ಖರ್ಚು ಶೇಕಡ 14.18 ರಷ್ಟಾಗಿರುತ್ತದೆ. |

ಕಡತ ಸಂಖ್ಯೆ: ನಅಇ 28 ಪಿ.ಆರ್.ಜೆ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು